quickmarketreports.com Date : 03-10-2015

# ವಿಯೆಟ್ನಾಂನ ಗೋಡಂಬಿ ರಫ್ತು ಈ ವರ್ಷ ಪ್ರಥಮ 9 ತಿಂಗಳುಗಳಲ್ಲಿ ಗಾತ್ರದಲ್ಲಿ 7.8 ಶೇಕಡಾ ಮತ್ತು ಗಳಿಕೆಯಲ್ಲಿ 20.6 ಶೇಕಡಾ ಹೆಚ್ಚಳ

ವಿಯೆಟ್ನಾಂ ಈ ವರ್ಷದ ಪ್ರಥಮ 9 ತಿಂಗಳುಗಳಲ್ಲಿ 2,45,000 ಟನ್ ಗೋಡಂಬಿ ತಿರುಳು ರಫ್ತು ಮಾಡಿ 1.78 ಬಿಲಿಯನ್ ಯು.ಎಸ್. ಡಾಲರ್ ಗಳಿಸಿ ಹಿಂದಿನ ವರ್ಷದ ಈ ಅವಧಿಗಿಂತ ಗಾತ್ರದಲ್ಲಿ 7.8 ಶೇಕಡಾ ಹಾಗೂ ಗಳಿಕೆಯಲ್ಲಿ 20.6 ಶೇಕಡಾ ವೃದ್ಧಿಯನ್ನು ಹೊಂದಿದೆ. ಸೆಪ್ಟೆಂಬರ್ ತಿಂಗಳೊಂದರಲ್ಲೇ 30,000 ಟನ್ ಗೋಡಂಬಿ ತಿರುಳು ರಫ್ತು ಮಾಡಿ 218 ಮಿಲಿಯನ್ ಅಮೇರಿಕನ್ ಡಾಲರ್ ಗಳಿಸಿದೆ.

ಇತರ ಕೃಷಿ ಉತ್ಪಾದನೆ, ಮೀನುಗಾರಿಕಾ ಉತ್ಪನ್ನಗಳಿಂದ ಗಳಿಸಿದ ಒಟ್ಟು ವಿದೇಶಿ ವಿನಿಮಯ 10.29 ಬಿಲಿಯನ್ ಅಮೇರಿಕನ್ ಡಾಲರ್‌ಗಳಾಗಿದ್ದು (ಜನವರಿ–ಸೆಪ್ಟೆಂಬರ್) ಹಿಂದಿನ ವರ್ಷದ ಈ ಅವಧಿಗಿಂತ 7.2 ಶೇಕಡಾ ಹಿನ್ನಡೆ ಕಂಡಿದೆ. ಯು.ಎಸ್., ನೆದರ್‌ಲ್ಯಾಂಡ್ ಮತ್ತು ಚೈನಾ, ವಿಯೆಟ್ನಾಂನಿಂದ ಪ್ರಮುಖ ಗೋಡಂಬಿ ಆಮದು ಮಾಡುವ ದೇಶಗಳಾಗಿವೆ. ಮತ್ತು ಈ ದೇಶಗಳಿಗೆ ವಿಯೆಟ್ನಾಂ ಒಟ್ಟು ರಫ್ತಿನ 61.17 ಶೇಕಡಾದಷ್ಟು ಗೋಡಂಬಿ ರಫ್ತು ಮಾಡುತ್ತಿದೆ.

ಪ್ರತಿ ಟನ್ ಗೋಡಂಬಿಯ ಸರಾಸರಿ ದರ ಪ್ರಥಮ ಎಂಟು ತಿಂಗಳುಗಳಲ್ಲಿ 7271 ಅಮೇರಿಕನ್ ಡಾಲರ್‌ಗಳಿದ್ದು ಹಿಂದಿನ ವರ್ಷದ ಇದೇ ಅವಧಿಗಿಂತ 12.48 ಶೇಕಡಾ ಹೆಚ್ಚಳವಾಗಿದೆ. ವಿಯೆಟ್ನಾಂ 2015ರಲ್ಲಿ ಒಟ್ಟು 3,20,000 ಟನ್ ಗೋಡಂಬಿ ರಫ್ತು ಮಾಡುವ ಗುರಿ ಹೊಂದಿದ್ದು ಇದರಿಂದ 2.5 ಬಿಲಿಯನ್ ಅಮೇರಿಕನ್ ಡಾಲರ್ ಗಳಿಸುವ ಯೋಜನೆಯಿದೆಯೆಂದು ವಿನ್‌ಕಪ್ ಹೇಳಿದೆ. ಈ ವರ್ಷದ ಇನ್ನುಳಿದ ಅವಧಿಯಲ್ಲಿ ವಿವಿಧ ದೇಶಗಳಿಂದ ಬೇಡಿಕೆ ಹೆಚ್ಚಳದ ನಿರೀಕ್ಷೆಯಿದ್ದು ಗುರಿ ತಲುಪುವುದು ಸಾಧ್ಯವಾಗಲಿದೆಯೆಂದು ಅವರ ಅನಿಸಿಕೆಯಾಗಿದೆ. ಆಫ್ರಿಕಾದ ದೇಶಗಳು, ಇಂಡೋನೇಶಿಯಾ ಮತ್ತು ಕಾಂಬೋಡಿಯಾಗಳಿಂದ ಒಟ್ಟು 60 ಶೇಕಡಾದಷ್ಟು ಕಚ್ಚಾ ಗೋಡಂಬಿಯನ್ನು ಆಮದು ಮಾಡಲಾಗಿದೆ ಎಂದು ಅಲ್ಲಿನ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯ ಹೇಳಿದೆ. ಆಧುನಿಕ ಕೃಷಿ ವಿಧಾನಗಳಿಂದ ಅಲ್ಲಿ ಕಚ್ಚಾ ಗೋಡಂಬಿ ಉತ್ಪಾದನೆ ಹೆಕ್ಟೇರ್‌ಗೆ 6 ಟನ್‌ಗಳಿಗೆ ವೃದ್ಧಿಯಾಗಿದೆಯೆಂದು ತಿಳಿದು ಬಂದಿದೆ.